International Journal of Kannada Research
www.kannadajournal.com

ISSN: 2454–5813
IJSR 2016; 2(1): 08-09
© 2016 IJKS
www.kannadajournal.com
Received: 02-11-2015
Accepted: 03-12-2015

**Dr. Puttamani Devida**
Asst. Professor, Department of Kannada, Sharanabasveshwar Commerce Degree College,, Kalaburagi-585103.

**Correspondence**
**Dr. Puttamani Devida**
Asst. Professor, Department of Kannada, Sharanabasveshwar Commerce Degree College,, Kalaburagi-585103.

# ಮೇಲುಕೋಟೆ ಒಂದು ಸಮೀಕ್ಷೆ

**Dr. Puttamani Devida**

ಬೆಂಗಳೂರಿನಿಂದ 148 ಕಿ.ಮೀ. ಮತ್ತು ಮಂಡ್ಯದಿಂದ 28 ಕಿ.ಮೀಟರ ದೂರದಲ್ಲಿ ಇತಿಹಾಸ ಪ್ರಸಿದ್ಧವಾದ ಮೇಲುಕೋಟೆ ಊರಿದೆ. ಇದು ಕಾವೇರಿ ನದಿಗೆ ಉತ್ತರದಲ್ಲಿ ನಾರಾಯಣಗಿರಿಯ ಮೇಲಿಂದ ಸಮುದ್ರ ಮಟ್ಟಕ್ಕಿಂತ 3000 ಅಡಿಗಳ ಎತ್ತರವಾದ ಬೆಟ್ಟದ ಮೇಲಿದೆ ಎಂದು ಹೇಳಲಾಗುತ್ತದೆ.

ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಆಚಾರ್ಯ ರಾಮಾನುಜಾಚಾರ್ಯರು ಮೇಲುಕೋಟೆಗೆ ಬಂದು ಅಲ್ಲಿ 14 ವರ್ಷಗಳವರೆಗೆ ಇದ್ದು ಹೊಯ್ಸಳ ದೊರೆ ವಿಷ್ಣುವರ್ಧನನ ಸಹಕಾರದೊಂದಿಗೆ ಅಲ್ಲಿ ನಾರಾಯಣಸ್ವಾಮಿಯನ್ನು ಪ್ರತಿಷ್ಠಾಪಿಸುವುದರೊಂದಿಗೆ ಆ ಊರಿನ ಜೀರ್ಣೋದ್ಧಾರದ ಕಾರ್ಯವನ್ನು ಕೈಕೊಂಡಿದ್ದರು ಎನ್ನುವುದನ್ನು ಅಲ್ಲಿಯ ವಿವಿಧ ಬಗೆಯ ಉಲ್ಲೇಖಗಳು ಸಾರುತ್ತವೆ.

**ಮೇಲುಕೋಟೆಯ ಪ್ರೇಕ್ಷಣೀಯ ಸ್ಥಳಗಳು**

ಐತಿಹಾಸಿಕ ಸ್ಥಳವಾದ ಮೇಲುಕೋಟೆಯು ಅನೇಕ ಸುಂದರವಾದ ದೊಡ್ಡ, ಸಣ್ಣ ದೇವಾಲಯಗಳನ್ನು, ಕೆರೆಗಳನ್ನು, ಕೊಳಗಳನ್ನು ಹೊಂದಿದೆ. ಇಲ್ಲಿಯ ಪ್ರಮುಖ ದೇವಾಲಯಗಳೆಂದರೆ, ಚೆಲುವನಾರಾಯಣ ಸ್ವಾಮಿಯ ದೇವಾಲಯ, ಯೋಗನರಸಿಂಹನ ದೇವಾಲಯ, ಬದರಿನಾರಾಯಣ ದೇವಾಲಯ, ಮಾರಮ್ಮನ ಗುಡಿ, ಪಟ್ಟಾಭಿರಾಮ ದೇವಾಲಯ, ಹೊರಗಮ್ಮನ ಗುಡಿ ಮುಂತಾದವುಗಳು.

ಕೊಳಗಳಲ್ಲಿ ಕಲ್ಯಾಣಿ ಕೊಳ, ಅಕ್ಕ ತಂಗಿಯರ ಕೊಳ, ಕೆರೆಗಳಲ್ಲಿ ದಳವಾಯಿ ಕೆರೆ, ಹೊಸಕೆರೆ, ರಾಯಗೋಪುರ, ನಯನಕ್ಷೇತ್ರ ಗುಹಾಂತರ ದೇವಾಲಯ, ತಾರ್ಕ್ಷ್ಯಕ್ಷೇತ್ರ. ಏಕಶಿಲಾ ಗಣಪತಿ, ಭುವನೇಶ್ವರಿ ಮಂಟಪ, ಮುಂತಾದವುಗಳು ಮನೋಹರವಾದ ಪ್ರೇಕ್ಷಣೆಯ ಸ್ಥಳಗಳಾಗಿವೆ. ಕನ್ನಡ ಕವಿ ಶ್ರೇಷ್ಠರಲ್ಲಿ ಒಬ್ಬರಾದ ಪು.ತಿ. ನರಸಿಂಹಾಚಾರ ಅವರ ಮನೆಯು ಕೂಡ ಇಲ್ಲಿಯೇ ಇದ್ದು ಆಕರ್ಷಣೆಯ ಕೇಂದ್ರವಾಗಿದೆ.

ಇಲ್ಲಿಯ ಪ್ರಮುಖ ಆಕರ್ಷಣೆಯಾದ ಶ್ರೀ ಚಲುವನಾರಾಯಣಸ್ವಾಮಿಯ ದೇವಾಲಯವು ವಿಸ್ತಾರವಾದ 280 ಅಡಿಗಳ ಚಚೌಕವಾದ ಕಟ್ಟಡ. ದೇವಾಲಯವು ಒಳ ಮತ್ತು ಹೊರಭಗದಲ್ಲಿ ಅನೇಕ ಕೈಸಾಲೆಗಳಿಂದ ಕೂಡಿದೆ. ಸ್ತಂಭಗಳನ್ನು ಹೊಂದಿದೆ. ದೇವಲಯದ ಎದುರಿಗೆ ದೊಡ್ಡದಾದ ಸುಮಾರು 60 ಅಡಿ ಎತ್ತರ ಏಕಶಿಲಾ ಗರುಡಗಂಭವಿದೆ. ದೇವಾಲಯವು ಚತುರ್ಮುಖ ಗೋಪುರವನ್ನು ಹೊಂದಿದ್ದು ಇದನ್ನು ಗಂಡಭೇರುಂಡ ಗೋಪುರ ಎಂದು ಕರೆಯಲಾಗುತ್ತದೆ. ಮಹಾದ್ವಾರದ ಒಳಭಾಗದಲ್ಲಿ ಶ್ರೀ ರಾಮದೇವರ ದೊಡ್ಡ ಚಿತ್ರ ಪಟವಿದೆ. ಎದುರಿಗೆ ಕೃಷ್ಣರಾಜ ಒಡೆಯರರ ಚಿತ್ರ ಪಟವಿದೆ. ಈ ದೇವಾಲಯದ ಸುಖನಾಸಿ ಪ್ರವೇಶಿಸಿದರೆ ಅಲ್ಲಿ ಶ್ರೀ ಚೆಲುವಾನಾರಾಯಣನ ಮೂರ್ತಿಯಿದೆ. ಅಲ್ಲಿ ಇನ್ನೂ ಅನೇಕ ಮೂರ್ತಿಗಳಿರುವುದನ್ನು ನೋಡಬಹುದು.

ಚೆಲುವನಾರಾಯಣನ ದೇಗುಲದ ಹತ್ತಿರದಲ್ಲಿಯೇ ಇರುವ ಇನ್ನೊಂದು ಅಕರ್ಷಕ ಕಟ್ಟಡವೆಂದರೆ ರಾಯಗೋಪುರ, ಇದು ಸುಮಾರು 50 ಅಡಿ ಎತ್ತರ ಉಳ್ಳದ್ದಾಗಿದ್ದು ಯಾವುದೇ ಆಧಾರವಿಲ್ಲದೆ ನಿಂತಿದೆ. ಇಲ್ಲಿರುವ ನಾಲ್ಕು ಕಂಬಗಳು ಕೆತ್ತನೆಯ ಕೆಲಸದಿಂದ ಕೂಡಿವೆ. ಇದು 15–16ನೇ ಶತಮಾನದಲ್ಲಿ ಗೋಪಾಲಕಾಯನೆಂಬ ಸಾಮಂತನು ಕಟ್ಟಿಸಿದನೆಂದು ಹೇಳಲಾಗಿದೆ. ಏಕಶಿಲಾ ಗಣಪತಿಯು ಮೇಲುಕೋಟೆಯ ಅತ್ಯಂತ ಸುಂದರ ಶಿಲ್ಪಗಳಲ್ಲಿ ಒಂದೆಂದು ಹೇಳಬಹುದು. ಇದು ಚಾಲುಕ್ಯರ ಕಾಲದ ವಿಗ್ರಹವೆಂದು ಹೇಳಲಾಗುತ್ತದೆ. ಕಲ್ಯಾಣಿಯಿಂದ ಉತ್ತರಕ್ಕೆ ಹೋದರೆ ನಾಮದ ಮಣ್ಣು ದೊರಕುವ ಸ್ಥಳವೆಂದು ಹೇಳಲಾದ ತಾರ್ಕ್ಯಕ್ಷೇತ್ರದ ದರ್ಶನವಾಗುತ್ತದೆ. ಒಂದೇ ಅರಸು ಮನೆತನಕ್ಕೆ ಸೇರಿದ ಅಕ್ಕತಂಗಿಯರು ಕಟ್ಟಿಸಿದರೆಂದು ಹೇಳಲಾಗುವ ಅಕ್ಕತಂಗಿ ಕೊಳವು ಬಹು ಮನೋಹರವಾದ ಇನ್ನೊಂದು ಪ್ರೇಕ್ಷಣೀಯ ತಾಣವಾಗಿದೆ. ತಂಗಿ ಕಟ್ಟಿಸಿದ ಕೊಳದ ನೀರು ಸಿಹಿ ನೀರಾದರೆ ಅಕ್ಕನ ಕೊಳದ ನೀರು ಸಪ್ಪೆ. ಆದರೆ ದಾಖಲೆಗಳಲ್ಲಿ ಇದನ್ನು ಚೆಲುವರಸಿಯರ ಕೊಳ ಎಂದು ಹೇಳಲಾಗಿದೆ. ಮೇಲುಕೋಟೆಗೆ ಪಶ್ಚಿಮದಲ್ಲಿ ಮೈಸೂರಿನ ದಳವಾಯಿಗಳು ಕಟ್ಟಿಸಿದರೆನ್ನಲಾದ ಕೆರೆಯೊಂದಿದೆ. ಇದನ್ನು ದಳವಾಯಿ ಕೆರೆ ಎಂದು ಕರೆಯಲಾಗುತ್ತದೆ. ಇದು ಕೂಡ ನೋಡಲರ್ಹವಾಗಿದೆ.

ಭುವನೇಶ್ವರಿಯ ಮಂಟಪವು ಇನ್ನೊಂದು ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿದೆ. ಇದು ಕಲ್ಯಾಣಿಯ ಉತ್ತರದಲ್ಲಿದ್ದು, ಗಜೇಂದ್ರವರದ ಸನ್ನಿಧಿಯ ಬಲಭಾಗಕ್ಕಿದೆ. ಅತ್ಯಂತ ಆಕರ್ಷಕವಾಗಿರುವ ಈ ಮಂಟಪವು 8 ಕಂಬಗಳಿಂದ ಕೂಡಿದ್ದು, ಅಷ್ಟ ಕೋನಾಕೃತಿಯಲ್ಲಿದೆ. ಕೆಳಭಾಗವು ಸೋಪಾನಗಳಿಂದ ಕೂಡಿದ ಅಧಿಷ್ಠಾನವನ್ನು ಒಳಗೊಂಡಿದ್ದು ಆಮೆಯ ಆಕೃತಿಯನ್ನು ಹೊಂದಿದೆ. ಮೇಲ್ಭಾಗದಲ್ಲಿಗಾರೆಯಿಂದ ಕೂಡಿದ ವಿಮಾನ ಪ್ರಾಸವಿದೆ. ಕಂಬಗಳಲ್ಲಿ ಅನೇಕ ದೇವ–ದೇವತಿಯರ ಚಿತ್ರಗಳನ್ನು ಕೆತ್ತಲಾಗಿದೆ. ಮೇಲುಕೋಟೆಯ ಹೊರಭಾಗದಲ್ಲಿ ಯೋಗನರಸಿಂಹನ ಬೆಟ್ಟದ ಹಿಂಭಾಗದ ಗುಹೆಯಲ್ಲಿ ಹೊರಗಮ್ಮನ ಗುಡಿಯಿದೆ. ಇದು ವಿಶಾಲವಾದ ಒಳಾಂಗಣವನ್ನು ಹೊಂದಿದೆ. ಗುಹೆಯ ಮಧ್ಯಭಾಗದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ಪ್ರತಿವರ್ಷವೂ ಇಲ್ಲಿ ವಿಶೇಷವಾದ ಜಾತ್ರೆ ನಡೆಯುತ್ತದೆ ಎಂದು ಹೇಳಲಾಗುತ್ತದೆ.

ಮೇಲುಕೋಟೆಯಲ್ಲಿ ಅನೇಕ ಉತ್ಸವಗಳು ನಡೆಯುತ್ತವೆ. ಅವುಗಳಲ್ಲಿ ವೈರಮುಡಿ ಉತ್ಸವ, ಕಲ್ಯಾಣೋತ್ಸವ ಮುಂತಾದವು ಪ್ರಮುಖ ಉತ್ಸವಗಳಾಗಿವೆ. ವೈರಮುಡಿ ಉತ್ಸವವು ಮಾರ್ಚ–ಎಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ಎಲ್ಲ ಜಾತ್ರೆಗಳಲ್ಲಿ ಇದೇ ಅತಿ ದೊಡ್ಡ ಉತ್ಸವ. ಇದು ಜಗತ್ಪ್ರಸಿದ್ಧವಾದ ಉತ್ಸವ ಹಾಗೂ ಜಾತ್ರೆ.

**ಸಂಸ್ಕೃತ ಸಂಶೋಧನಾ ಸಂಸತ್**

ಸಂಸ್ಕೃತ ಭಾಷೆಯ ಬೆಳವಣಿಗೆ, ಪ್ರಾಚೀನ ಗ್ರಂಥಗಳ ಸಂರಕ್ಷಣೆ ಮತ್ತು ಸಂಶೋಧನೆಗಳಿಗಾಗಿ ಹುಟ್ಟಿಕೊಂಡಿರುವ ಸಂಸ್ಕೃತ ಸಂಶೋಧನಾ ಸಂಸತ್ ಎನ್ನುವ ಸಂಸ್ಥೆಯು ರಾಯಗೋಪುರ ಮತ್ತು ಅಕ್ಕತಂಗಿಯರ ಕೊಳದ ಹಿಂಭಾಗದ ವಿಶಾಲವಾದ ಪ್ರದೇಶದಲ್ಲಿದೆ. ಇಲ್ಲಿ ವಿವಿಧ ರೀತಿಯ ತಾಳೆ ಪತ್ರಗಳನ್ನು ಸಂರಕ್ಷಿಸಲಾಗಿದೆ. ರಾಮಾನುಜಾಚಾರ್ಯರ ಕೃತಿಗಳನ್ನು ಕನ್ನಡ ಹಾಗೂ ಅಂಗ್ಲ ಭಾಷೆಗಳಿಗೆ ಅನುವಾದಿಸಲಾಗಿದೆ. ಇಡೀ ಕರ್ನಾಟಕದಲ್ಲಿಯೇ ಇದು ಒಂದು ವಿಶಿಷ್ಟ ಸಂಸ್ಥೆಯಾಗಿದೆ ಎಂದು ಹೇಳಬಹುದು.

**ಸಂಸ್ಕೃತ ಕಾಲೇಜು: (ಸರಕಾರಿ)**

ದೇವಸ್ಥಾನದ ಕಟ್ಟಡದ ಎಡಪಾರ್ಶ್ವದಲ್ಲಿರುವ ಶ್ರೀ ವೇದ–ವೇದಾಂತ ಭೋಧನಿ ಸಂಸ್ಕೃತ ಮಹಾಪಾಠ ಶಾಲಾ ಎಂಬ ಈ ಕಾಲೇಜು ಅತ್ಯಂತ ಪ್ರಾಚೀನವಾಗಿದ್ದು ಕರ್ನಾಟಕದಲ್ಲೇ ಮೊದಲನೆಯದೆಂದು ಹೆಸರು ಪಡೆದಿದೆ.

ಮೈಸೂರಿನ ಮಹಾರಾಜರಿಂದ ಕ್ರಿ.ಶ. 1854ರಲ್ಲಿ ಅರಂಭವಾದ ಇದು ಧಾರ್ಮಿಕ ದತ್ತಿ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಹಿಸುತ್ತಿದೆ.

ಈ ಸರಕಾರಿ ಸಂಸ್ಕೃತ ಕಾಲೇಜಿನಲ್ಲಿ ಬೋಧಿಸುವ ವಿಷಯಗಳೆಂದರೆ ವಿಶಿಷ್ಟಾದ್ವೈತ, ವೇದಾಂತ, ಅಲಂಕಾರ, ಪ್ರಾಚೀನ, ನವೀನ ನ್ಯಾಯಪದ್ಧತಿಗಳು, ಧರ್ಮಶಾಸ್ತ್ರ, ವ್ಯಾಕರಣ ಶಾಸ್ತ್ರಗಳು, ಶುಕ್ಲ, ಕೃಷ್ಣಯಜುರ್ವೇದಗಳು ಹಾಗೂ ವಿಶಿಷ್ಟವಾದ ದ್ರಾವಿಡ ಪ್ರಬಂಧಗಳ ಅಧ್ಯಯನಕ್ಕೆ ಅವಕಾಶವಿದೆ. ಪ್ರಸ್ತುತ ಇಲ್ಲಿ ಸುಮಾರು 150 ವಿದ್ಯಾರ್ಥಿಗಳು ಅಧ್ಯಯನಶೀಲರಾಗಿದ್ದಾರೆ. ಇಲ್ಲಿ ಸುಮಾರು 900ಕ್ಕೂ ಹೆಚ್ಚು ಪ್ರಾಚೀನ ತಾಳೆಪತ್ರಗಳು, 250ಕ್ಕೂ ಹೆಚ್ಚು ಅಪ್ರಕಟಿತ ಹಸ್ತ ಪ್ರತಿಗಳೂ ಇವೆ ಎನ್ನಲಾಗಿದೆ.

**ಪುಸ್ತಕದ ಮನೆ**

ಇನ್ನೊಂದು ಅದ್ಭುತ, ನಂಬಲಸಾಧ್ಯವಾದ ಸ್ಥಳವೆಂದರೆ ಪುಸ್ತಕದ ಮನೆ ಇದು ಮೈಸೂರು ಚನ್ನಪಟ್ಟಣ ದಾರಿಯಲ್ಲಿ ಶ್ರೀರಂಗಪಟ್ಟಣದಿಂದ ಸುಮಾರು 8 ಕಿ.ಮೀಟರ ದೂರದಲ್ಲಿರುವ ಪಾಂಡವಪುರದ ಹತ್ತಿರವಿರುವ ಹರಳಹಳ್ಳಿಯಲ್ಲಿರುವ ಬ್ರಹತ್ ಗ್ರಂಥಲಯ ಸುಮಾರು ಎರಡು ಲಕ್ಷಕ್ಕಿಂತ ಮೇಲ್ಪಟ್ಟ ಪುಸ್ತಕರಾಶಿಯು ಇಲ್ಲಿದೆ. ಇದರ ಒಡೆಯರು ಎಂ. ಅಂಕೇಗೌಡರು ಇವರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಚಿನಕುರುಳಿ ಗ್ರಾಮದವರು ಪುಸ್ತಕದ ಮನೆಯು ಇವರ ಖಾಸಗಿ ಗ್ರಂಥಾಲಯ.

ಶೇಕ್ಸ್‌ಪಿಯರನ ಸಮಗ್ರ ನಾಟಕಗಳು, ಭಗವದ್ಗೀತೆ ಹಾಗೂ ಇದರ ಬಗ್ಗೆ ಬಂದಿರುವ ಎಲ್ಲ ಟೀಕೆಗಳು ಎಲ್ಲ ಭಾಷೆಯ ರಾಮಾಯಾಣ, ಮಹಾಭಾರತಗಳು, ವಿಜ್ಞಾನದ ಎಲ್ಲ ಪುಸ್ತಕಗಳು ಭೂಗೋಳ, ಜ್ಯೋತಿಷ್ಯ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಎಲ್ಲ ಬಗೆಯ ಸಂಚಿಕೆ ಒಂದೇ ಎರಡೇ ಈ ಗ್ರಂಥಾಲಯದಲ್ಲಿ ಸಿಗದೇ ಇರುವ ಪುಸ್ತಕಗಳೇ ಇಲ್ಲ. ಈ ಗ್ರಂಥಾಲಯ ನೋಡುವುದೇ ಒಂದು ಪುಣ್ಯ. ಒಂದೇ ಮಾತಿನಲ್ಲಿ ಹೇಳುವುದಾದರೆ ಇದು ಅಂಕೇಗೌಡರು ಮಾಡಿದ ಪವಾಡವೇ ಸರಿ. ಅದಕ್ಕೆ ಅವರು ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದಾರೆ. ಇವರ ಕಷ್ಟದಲ್ಲಿ ಆಸರೆಯಾಗಿ ನಿಂತವರೆಂದರೆ ಉದ್ಯಮಿ ಹರಿಖೋಡೆ, ಅಂಕೇಗೌಡರ ಚಿಕ್ಕಮನೆಯಲ್ಲಿದ್ದ ಈ ಗ್ರಂಥಾರಾಶಿಯನ್ನು ನೋಡಿ ದಿಗ್ಮೂಢರಾದ ಹರಿಖೋಡೆಯವರು ಮೊದಲು ಇವರ ಸಂಗ್ರಹನದಲ್ಲಿನ ಪುಸ್ತಕ ಜೋಡಣೆ ಮತ್ತು ವಿಂಗಡಣೆಗಾಗಿ ಒಬ್ಬ ಕಂಪ್ಯೂಟರ್ ಇಂಜಿನೀಯರ್ ಸೇರಿದಂತೆ 40 ಮಂದಿಯನ್ನು ಕಳುಹಿಸಿದರು. ಇವರೆಲ್ಲರೂ ಸೇರಿ 35 ದಿನಗಳ ಕಾಲ ವರ್ಗಿಕರಣ ಮಾಡಿ ಒಟ್ಟು 65 ಭಾಗಗಳನ್ನಾಗಿ ಮಾಡಿದರಂತೆ. ನಂತರ ಅಂಕೇಗೌಡ ಜ್ಞಾನ ಪ್ರತಿಷ್ಠಾನವನ್ನು ನೊಂದಾಯಿಸಿ ಆ ಮೂಲಕ ಹರಳಹಳ್ಳಿಯಲ್ಲಿ.

ಅರ್ಧಕ್ಕೆ ನಿಂತಿದ್ದ ಸಿನಿಮಾ ಹಾಲನ್ನು 12 ಲಕ್ಷಕ್ಕೆ ಖರೀದಿಸಿ 120 90 ಅಳತೆಯಲ್ಲಿ ಸುಸಜ್ಜಿತವಾದ ರೂ. 65 ರಿಂದ 70 ಲಕ್ಷ ಬೆಲೆ ಬಾಳುವ ಕಟ್ಟಡವನ್ನು ನಿರ್ಮಿಸಿ ಕೊಟ್ಟಿದ್ದಾರೆ. ಹರಿಖೋಡೆಯವರು ಈ ಕಾರ್ಯವೂ ಸಾಮಾನ್ಯವಾದುದಲ್ಲ. ಅಸಾಮಾನ್ಯ ವ್ಯಕ್ತಿತ್ವಗಳು ಒಂದೆಡೆ ಸೇರಿದಾಗ ಅದ್ಭುತವೊಂದರ ಸೃಷ್ಠಿಯಾಗುತ್ತದೆ ಎನ್ನುವುದಕ್ಕೆ ಅಂಕೇಗೌಡರು ಮತ್ತು ಹರಿಖೋಡೆಯವರು ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತಾರೆ.

ಈ ರೀತಿಯಾಗಿ ಪ್ರವಾಸದ ಈ ಎರಡೂ ಸ್ಥಳಗಳೂ ತಮ್ಮ–ತಮ್ಮಲ್ಲಿಯೇ ವಿಶಿಷ್ಟವಾಗಿವೆ. ಅತ್ಯಮೂಲ್ಯವಾಗಿವೆ. ಮತ್ತು ಅಷ್ಟೇ ಮಹತ್ವಪೂರ್ಣವಾಗಿವೆ.